

ಹಾಳೆಯ ಇಕ್ಕೆಲಗಳಲ್ಲೂ ಊಹಿಸಲಾಗದಷ್ಟು ದೂರ ದೂರದ ಕಾಲ ದಿನಗಳು ಹತ್ತಿರ ಹತ್ತಿರದಲ್ಲಿಯೇ ಒಂದರ ಅರಿವು ಇನ್ನೊಂದಕ್ಕೆ ಇಲ್ಲದಂತೆ ಇವೆ. ಈಗ ಚಾಲ್ತಿಯಲ್ಲಿರುವ ಡಿಸೆಂಬರಿನ ಬೆನ್ನಿಗೆ ಎಂದೋ ಕಳೆದ ಜನವರಿ, ಆರಂಭ ಅಂತ್ಯಗಳು ಒಂದೇ ಕ್ಷಣದ ಎರಡು ಸಂಭವಗಳಂತಿವೆ.

ಇಂಗ್ಲೆಂಡಿನ ಪ್ರತಿ ಊರು, ಜನ, ಮಕ್ಕಳು, ಅಂಗಡಿ, ರಸ್ತೆ ಎಲ್ಲವೂ ದೊಡ್ಡ ಹಬ್ಬವೊಂದು ಇನ್ನೇನು ಸಂಭವಿಸುವ ಸಿದ್ಧತೆಯಲ್ಲಿ ತೊಡಗಿರುವಾಗ ನಾನು ಕ್ಯಾಲೆಂಡರಿನ ಪ್ರತಿ ಹಾಳೆ ಮಡಚುವಾಗಲು ಕೂಡಿಡುತ್ತಿದ್ದ ರಜೆಯನ್ನೆಲ್ಲ ಒಟ್ಟುಮಾಡಿಕೊಂಡು ಇಲ್ಲೆಲ್ಲೂ ಆಸುಪಾಸಿನಲ್ಲಿಲ್ಲದ ಊರೊಂದಕ್ಕೆ ಹೊರಡುವ ತಯಾರಿಯಲ್ಲಿ ತೊಡಗಿದ್ದೇನೆ. ಜಗತ್ತಿನ ಯಾವ ಉಲ್ಲಾಸ ಸಂಭ್ರಮಕ್ಕಿಂತಲೂ ಮಿಗಿಲಾದ, ಊರು ಬಿಟ್ಟವನು ಊರಿಗೆ ಭೇಟಿ ಕೊಡುವ ಹಬ್ಬ ನನ್ನ ಮಟ್ಟಿಗೆ ಬರುವುದೂ ಬಹುತೇಕ ಡಿಸೆಂಬರ್ ತಿಂಗಳಿನಲ್ಲಿಯೇ. ನಾನು ಮತ್ತು ನನ್ನ ಕನ್ನಡ ಕ್ಯಾಲೆಂಡರ್ ಎರಡೂ ಊರಲ್ಲದ ಊರಿನಲ್ಲಿ ಇರುವಾಗ, ನನ್ನೂರು ಮರವಂತೆಯ ನೀಲಿ ಆಕಾಶದ ಕೆಳಗಿನ ನೀಲ ಸಮುದ್ರ ಭೋರ್ಗರೆಯುತ್ತದೆ. ತೆರೆಗಳು ಸುರುಳಿ ಸುತ್ತುತ್ತವೆ, ಮರಳಿನ ಮೇಲೆ ಓಡುತ್ತವೆ, ಏಡಿಗಳನ್ನು ಹಿಂಬಾಲಿಸಿ ಹೆದರಿಸುತ್ತವೆ, ತೆಂಗಿನ ಗರಿಗಳು ತೂಗುತ್ತವೆ. ಬಿಸಿಲು, ನದಿ ಸಮುದ್ರಗಳ ಮೇಲೆ ಚೆಲ್ಲಿ ಹರಡಿ ಫಳಫಳಗುಡುತ್ತದೆ. ಲಂಗರು ಹಾಕಿದ ದೋಣಿ ಎಡಬಲಕ್ಕೆ ಅಲುಗಿ ಮಂದಹಾಸ ಬೀರುತ್ತದೆ. ಕ್ಯಾಲೆಂಡರಿನ ಹಾಳೆ ಬದಲಿಸಿದಂತೆ ಊರು ಬದಲಿಸಿದವನನ್ನು ಊರು ಬಿಟ್ಟವನನ್ನು ಮತ್ತೆ ಬಾ ಎನ್ನುತ್ತದೆ; ಕರೆದು ಆದರಿಸಿ ಉಪಚರಿಸಿ ಬೀಳ್ಕೊಡುವ ಭರವಸೆ ನೀಡುತ್ತದೆ.

●